ಆ) ಹೀಗೆ ಭಾವಿಸಲಾಗದು.

ಇ) ಅಪೆಕ್ಸ್ ಬ್ಯಾಂಕ್ ವರ್ಗಾವಣೆ ಮಾಡುತ್ತಿರುವಂತೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳೂ ಸಹ ಶಾಖೆಗಳಿಗೆ ವರ್ಗಾವಣೆ ಮಾಡುತ್ತಿವೆ.

ಈ) ಕರ್ತವ್ಯ ನಿಷ್ಠೆ, ಶಿಸ್ತು ಜಾರಿಗೆ ತರುವ ವಿಚಾರ ಆಯಾ ಜಿಲ್ಲಾ ಬ್ಯಾಂಕುಗಳ ಆಡಳಿತ ವರ್ಗದ ಅಧೀನಕ್ಕೆ ಒಳಪಟ್ಟಿದ್ದು, ಇದನ್ನು ಪಾಲಿಸುವಂತೆ ಸೂಚಿಸಲಾಗಿದೆ.

ಮೈಸೂರು ಕೃಷಿ ಮಾರುಕಟ್ಟೆ ಪ್ರಾಂಗಣಕ್ಕೆ ಸಂತೆಪೇಟೆ ಸ್ಥಳಾಂತರ

900 (924) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ತಾಲ್ಲೂಕು ಕೃಷಿ ಮಾರುಕಟ್ಟೆ ಸಮಿತಿ ವ್ಯಾಪ್ತಿಯ ಬಂಡೀಪಾಳ್ಯ ಪ್ರಾಂಗಣಕ್ಕೆ ಸಂತೆ ಪೇಟೆಯನ್ನು ಯಾವಾಗ ಸ್ಥಳಾಂತರಿಸಲಾಗುವುದು;

ಆ) ಈ ದಿಸೆಯಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮ ಗಳೇನು;

ಇ) ಸ್ಥಳಾಂತರಿಸಲು ಇರುವ ನಿರ್ಬಂದಗಳೇನು;

ಈ) ಈ ಪ್ರಾಂಗಣದಲ್ಲಿ ರೈತರಿಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

ಉ) ಹಾಗಿದ್ದಲ್ಲಿ ಸರ್ಕಾರ ಕೈಗೊಂಡಿರುವ ನಿವಾರಣೋಪಾಯಗಳೇನು?

ಶ್ರೀ ಆರ್. ಬಿ. ತಿಮ್ಮಾಪುರ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಹಲವಾರು ವರ್ತಕರು ಅಂಗಡಿ-ಮ-ಗೋ-ದಾಮುಗಳನ್ನು ನಿರ್ಮಿಸುವ ಕಾರ್ಯ ಪ್ರಾರಂಭಿಸಿದ್ದು, ಕಾಮಗಾರಿಯು ಕಾರ್ಯ ಪ್ರಾರಂಭಿಸಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಅಲ್ಲದೇ, ಸಮಿತಿಯ ವತಿಯಿಂದ 20 ವರ್ತಕರುಗಳಿಗೆ-ಗೋದಾಮು ಕಟ್ಟಲು ಕ್ರಮ ಜರುಗಿಸಲಾಗಿದೆ. ಅಂಗಡಿ-ಮ- ಗೋದಾಮುಗಳ ನಿರ್ಮಾಣ ಮುಗಿದ ನಂತರ ವ್ಯಾಪಾರ ವಹಿವಾಟನ್ನು ಪೂರ್ಣವಾಗಿ ಸ್ಥಳಾಂತರಿಸಲಾಗುವುದು.

ಆ) ಮೇಲಿನಂತೆ.

ಇ) ಮೇಲಿನಂತೆ.

ಈ) ಬಂದಿದೆ. ರೈತರಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ.

ಉ) ಉದ್ಭವಿಸುವುದಿಲ್ಲ.

ಚಾಮರಾಜನಗರ ಟಿ.ಎ.ಪಿ.ಸಿ.ಎಂ.ಎಸ್.ನಲ್ಲಿ ಅವ್ಯವಹಾರ

901 (1241) ಶ್ರೀ ಸಿ.ಗುರುಸ್ವಾಮಿ (ಚಾಮರಾಜನಗರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?